ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-584133, ರಾಯಚೂರು, ಕರ್ನಾಟಕರಾಜ್ಯ, ಭಾರತ
ಆಡಳಿತ ವಿಭಾಗ

# ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ 10.02.2023 ರಂದು ಶುಕ್ರವಾರ ಮುಂಜಾನೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳು.

ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ.ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಶಿವಬಸಪ್ಪ ಮಾಲಿಪಾಟೀಲ | ಸಿಂಡಿಕೇಟ್ ಸದಸ್ಯರು |
| 3. | ಶ್ರೀ ಜಗದೀಶ್ ಹೆಚ್. | ಸಿಂಡಿಕೇಟ್ ಸದಸ್ಯರು |
| 4. | ಶ್ರೀ ಮೋಹನ್ ಕುಮಟಕರ್ | ಸಿಂಡಿಕೇಟ್ ಸದಸ್ಯರು |
| 5. | ಶ್ರೀಮತಿ ಕಾವೇರಿ ಕೇದಾರನಾಥ್ | ಸಿಂಡಿಕೇಟ್ ಸದಸ್ಯರು |
| 6. | ಶ್ರೀ ಶಂಕರ ರೆಡ್ಡಿ ಜಿ. | ಸಿಂಡಿಕೇಟ್ ಸದಸ್ಯರು |
| 7. | ಪ್ರೊ.ಭಜಂತ್ರಿ ವೈ.ಎಂ. | ಸಿಂಡಿಕೇಟ್ ಸದಸ್ಯರು |
| 8. | ಶ್ರೀ ಸಂಜಯ ಕುಮಾರ್ ಮೂಥಾ | ಸಿಂಡಿಕೇಟ್ ಸದಸ್ಯರು |
| 9. | ಡಾ.ಕೆ.ಸುಭಾಷಚಂದ್ರ | ಸಿಂಡಿಕೇಟ್ ಸದಸ್ಯರು |
| 10. | ಡಾ.ಯಂಕಣ್ಣ | ಸಿಂಡಿಕೇಟ್ ಸದಸ್ಯರು |
| 11. | ಡಾ.ಅರುಣಕುಮಾರಿ ಟಿ. | ಸಿಂಡಿಕೇಟ್ ಸದಸ್ಯರು |
| 12. | ಪ್ರೊ.ಯರಿಸ್ವಾಮಿ.ಎಂ ಕುಲಸಚಿವರು (ಮೌಲ್ಯಮಾಪನ) | ಸಿಂಡಿಕೇಟ್ ಸದಸ್ಯರು |
| 13. | ಪ್ರೊ.ವಿಶ್ವನಾಥ ಎಂ. ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಿಂಡಿಕೇಟ ಸದಸ್ಯರುಗಳನ್ನು ಸ್ವಾಗತಿಸಿ ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಐಟಂ.ನಂ. | ವಿಷಯ | ನಿರ್ಣಯ |
|---|---|---|
| 01 | ದಿನಾಂಕ 24.11.2022 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ 24.11.2022 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯದ ಎಲ್ಲಾ ನಡವಳಿಗಳನ್ನು ಸಿಂಡಿಕೇಟ್ ದೃಢೀಕರಿಸಿತು. |
| 02 | ದಿನಾಂಕ 19.12.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ 19.12.2022 ರಂದು ಜರುಗಿದ ತುರ್ತು ಸಿಂಡಿಕೇಟ್ ಸಭೆಯ ನಡವಳಿಗಳನ್ನು ಸಿಂಡಿಕೇಟ್ ದೃಢೀಕರಿಸಿತು. |

| | | |
|---|---|---|
| 03 | ರಾಯಚೂರು ವಿಶ್ವವಿದ್ಯಾಲಯದ ಯುಜಿ/ಪಿಜಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಉತ್ತರ ಪತ್ರಿಕೆಗಳ ತಯಾರಿಕೆಯ ಸಂಬಂಧ ಈಗಾಗಲೇ ನೀಡಿರುವ ಟೆಂಡರ್ ಮೊತ್ತವನ್ನು ಪರಿಷ್ಕರಿಸುವ ಸಂಬಂಧ ಚರ್ಚೆ. | ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಕೂಲಂಕುಶವಾಗಿ ಸಭೆಯಲ್ಲಿ ಚರ್ಚಿಸಿ, ಮಾರುಕಟ್ಟೆಯಲ್ಲಿರುವ ದರಗಳು ಹಾಗೂ ಪೇಪರ್ ಖರೀದಿಸಲು ಇರುವಂತಹ ಏರಿಳಿತಗಳನ್ನು ಅವಲೋಕಿಸಿ ಪರೀಕ್ಷಾ ಕಾರ್ಯವು ಅತ್ಯಂತ ಜರೂರಾಗಿರುವುದರಿಂದ ಇದರ ಬಗ್ಗೆ ತೀರ್ಮಾನಿಸಲು ಸಮಿತಿಯನ್ನು ರಚಿಸಿ ಒಂದು ವಾರದೊಳಗೆ ವರದಿಯನ್ನು ನೀಡಲು ಅನುಮೋದಿಸಲಾಯಿತು.<br>ಸಮಿತಿಯನ್ನು ಕೆಳಕಂಡಂತೆ ರಚಿಸಲಾಯಿತು ಹಾಗೂ ಕೆಳಕಂಡ ಸಮಿತಿ ಮುಂದೆ ಜೆಮಿನಿ ಗ್ರಾಫಿಕ್ಸ್ ಕಂಪನಿಯ ಪರವಾಗಿ ಒಬ್ಬರನ್ನು ಪ್ರತಿನಿಧಿಯಾಗಿ ನೇಮಿಸಿ ಸಮಿತಿಯ ಮುಂದೆ ತಮ್ಮ ನಿಲುವನ್ನು ಮಂಡಿಸಲು ಅವಕಾಶ ಕಲ್ಪಿಸಲು ವರದಿಯನ್ನು ಕುಲಸಚಿವರಿಗೆ ನೀಡಿ ಅದರ ಅನುಷ್ಠಾನವನ್ನು ಕುಲಪತಿಗಳ ತೀರ್ಮಾನಕ್ಕಾಗಿ ನೀಡಲು ನಿರ್ಧರಿಸಲಾಯಿತು.<br>ಅಧ್ಯಕ್ಷರಾಗಿ ರಾಯಚೂರು ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನಾ) ಪ್ರೊ.ಯರಿಸ್ವಾಮಿ ಎಂ, ಸದಸ್ಯರುಗಳಾಗಿ ಸಿಂಡಿಕೇಟ ಸದಸ್ಯರಾದ ಶ್ರೀ.ಸಂಜಯ್ ಕುಮಾರ್ ಮೂಥಾ, ಶ್ರೀ.ಜಗದೀಶ್ .ಹೆಚ್.ಬಿನ್.ಅಮರಣ್ಣ ಅವರನ್ನು ನೇಮಿಸಲಾಯಿತು. |
| 04 | ರಾಯಚೂರು ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನದಲಿ ತಾತ್ಕಾಲಿಕವಾಗಿ ನೇಮಕ ವಾಗಿರುವ ಡಾ. ರಾಘವೇಂದ್ರ ಫತೇಪುರ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಇವರ ಸೇವಾ ಅವಧಿಯನ್ನು ಮುಂದುವರೆಸುವ ಕುರಿತು. | ಡಾ. ರಾಘವೇಂದ್ರ ಫತೇಪುರ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು, ಇವರು (1 ಮಾರ್ಚ್ 2021) ಕಳೆದ 2 ವರ್ಷಗಳಿಂದ ರಾಯಚೂರು ವಿಶ್ವವಿದ್ಯಾಲಯದಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾಗಿ, ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇವರನ್ನು ಈ ಶೈಕ್ಷಣಿಕ ಸಾಲಿಗೆ ಮುಂದುವರೆಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ಅವರ ಕರ್ತವ್ಯಗಳ ನಿರ್ವಹಣೆ ಹಾಗೂ ಅವರ ಸೇವಾ ಕಾರ್ಯ ವೈಖರಿಯಿಂದ ರಾಯಚೂರು ವಿಶ್ವವಿದ್ಯಾಲಯಕ್ಕೆ ಬಹಳ ಅವಶ್ಯಕ ಹಾಗೂ ಅನಿವಾರ್ಯವಾಗಿದ್ದು, ಈ ಅಂಶಗಳನ್ನು ಪರಿಗಣಿಸಿ ಅವರ ಸೇವಾ ಅವಧಿಯನ್ನು ಒಂದು ವರ್ಷದ ಕಾಲಕ್ಕೆ ಮುಂದುವರೆಸಿ ಅವರ ವೇತನವನ್ನು 35,000/- ದಿಂದ ರೂ.50,000/- ಗಳವರೆಗೆ ಪರಿಷ್ಕರಿಸಿ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |

| | | |
|---|---|---|
| 05 | ಪರೀಕ್ಷಾ ವಿಭಾಗದ ಮೌಲ್ಯಮಾಪನ ಹಾಗೂ ಇನ್ನಿತರ ಕಾರ್ಯಚಟುವಟಿಕೆಗಳಿಗೆ ಕಟ್ಟಡದ ಅವಶ್ಯಕತೆ ಇರುವ ಪ್ರಯುಕ್ತ ತಾತ್ಕಾಲಿಕವಾಗಿ 5000 ಚದರ ಅಡಿಯ ಟ್ರಸ್ (Truss Construction) ಕಟ್ಟಡ ನಿರ್ಮಾಣ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯವು 2021-22 ನೇ ಸಾಲಿನ ಎಲ್ಲಾ ಪರೀಕ್ಷಾ ಕಾರ್ಯಗಳನ್ನು ಮುಗಿಸಿ, 1ನೇ ಸೆಮಿಸ್ಟರ್ ಫಲಿತಾಂಶವನ್ನು ಪ್ರಕಟಿಸಿ 2ನೇ ಸೆಮಿಸ್ಟರ್ ಮೌಲ್ಯಮಾಪನವನ್ನು ಮಾಡಲಾಗುತ್ತಿದ್ದು, 2022-23 ನೇ ಸಾಲಿನ 1ನೇ ಮತ್ತು 3 ನೇ ಸೆಮಿಸ್ಟರ್ ಪರೀಕ್ಷೆ ನಡೆಸಲು ತಯಾರಿ ನಡೆಸುತ್ತಿದೆ. ಸುಮಾರು 3 ಲಕ್ಷ ಉತ್ತರ ಪತ್ರಿಕೆಗಳು ಬಂದಿದ್ದು ಹಾಗೂ ಸುಮಾರು 2 ಲಕ್ಷ ಉತ್ತರ ಪತ್ರಿಕೆಗಳನ್ನು ಪರೀಕ್ಷೆಗಳಿಗೆ ವಿತರಿಸಲು ಉತ್ತರ ಪತ್ರಿಕೆಗಳು ವಿಶ್ವವಿದ್ಯಾಲಯದಲ್ಲಿದ್ದು, ಈ ಎಲ್ಲಾ ಉತ್ತರ ಪತ್ರಿಕೆಗಳನ್ನು ಸುರಕ್ಷಿತವಾಗಿಡಲು ಹಾಗೂ ಮೌಲ್ಯಮಾಪನ ನಡೆಸಲು ವಿಶ್ವವಿದ್ಯಾಲಯದಲ್ಲಿ ಸ್ಥಳದ ಅಭಾವವಿದ್ದು, ಪರೀಕ್ಷೆ ಕಾರ್ಯ ನಡೆಸಲು ಬಹಳ ಸಂಕೀರ್ಣವಾಗಿದ್ದು, ಈ ವಿಚಾರವಾಗಿ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ ತುರ್ತಾಗಿ ಸುಮಾರು 5000 ಚದರ ಅಡಿಯ (Truss based Construction) ಕಟ್ಟಡ ನಿರ್ಮಾಣ ಮಾಡಲು ರಾಯಚೂರು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳನ್ನು ಬಳಸಿ ಸರ್ಕಾರದ ನಿಯಮಾನುಸಾರ (Truss based Construction) ಕಟ್ಟಡ ನಿರ್ಮಾಣ ಮಾಡಲು ಸಭೆಯು ಅನುಮೋದನೆ ನೀಡಿತು. |
| 06 | ವಿಶ್ವವಿದ್ಯಾಲಯದಲ್ಲಿ ವಿವಿಧ ಅಧ್ಯಯನ ವಿಭಾಗಗಳ ಅತಿಥಿ ಉಪನ್ಯಾಸಕರುಗಳಿಗೆ ತರಗತಿಗಳ 2 ನೇ ಮಹಡಿ ಮೇಲೆ ತಾತ್ಕಾಲಿಕ ಕಟ್ಟಡ ನಿರ್ಮಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದಲ್ಲಿ 20 ವಿವಿಧ ಅಧ್ಯಯನ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು, 2022-23 ನೇ ಶೈಕ್ಷಣಿಕ ಸಾಲಿಗೆ 86 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 52 ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಿದ್ದು ಹಾಗೂ 34 ಅರೆಕಾಲಿಕ ಅತಿಥಿ ಉಪನ್ಯಾಸಕರು ನೇಮಕಗೊಂಡಿದ್ದು, ಅತಿಥಿ ಉಪನ್ಯಾಸಕರು ಕಛೇರಿ ವೇಳೆಯಾದ ಬೆಳಿಗ್ಗೆ 10.30 ರಿಂದ ಸಂಜೆ 6 ಗಂಟೆವರೆಗೆ ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ಶೈಕ್ಷಣಿಕ ಕೊಠಡಿ ಹಾಗೂ ಅತಿಥಿ ಉಪನ್ಯಾಸಕರ ವಿಶ್ರಾಂತಿ ಕೊಠಡಿಯ ಅಭಾವವಿದ್ದು ಇದನ್ನು ಶೈಕ್ಷಣಿಕ ಬ್ಲಾಕ್‌ನ 2 ನೇ ಮಹಡಿ ಮೇಲೆ ಕಟ್ಟಡ ನಿರ್ಮಾಣ ಮಾಡಲು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸುವ ಒಪ್ಪಿಗೆ ನೀಡಿ ಸರ್ಕಾರದ ನಿಯಮಾನುಸಾರ ಹಾಗೂ KTPP Act ನಿಯಮಾವಳಿಗಳನ್ನು ಪಾಲಿಸುವ ಮೂಲಕ ಕಟ್ಟಡ ನಿರ್ಮಾಣ ಮಾಡಲು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಲಾಯಿತು. |

| | | |
|---|---|---|
| 07 | ರಾಯಚೂರು ವಿಶ್ವವಿದ್ಯಾಲಯದ 20 ವಿಭಾಗಗಳ 2022-23ನೇ ಸಾಲಿನ ಕಾರ್ಯಭಾರಗಳಿಗೆ ಅನುಗುಣವಾಗಿ ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಯನ್ನು ಕಾಯ್ದಿರಿಸಿ ನೇಮಕವಾಗಿರುವ ಅತಿಥಿ ಉಪನ್ಯಾಸಕರುಗಳ ಪಟ್ಟಿಯನ್ನು ಅನುಸಮರ್ಥನೆ ಮಾಡುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ 20 ವಿಭಾಗಗಳ 2022-23ನೇ ಸಾಲಿನ ಕಾರ್ಯಭಾರಗಳಿಗೆ ಅನುಗುಣವಾಗಿ ನೇಮಕವಾಗಿರುವ ಅತಿಥಿ ಉಪನ್ಯಾಸಕರುಗಳ ಆಯ್ಕೆಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥನೆ (Ratification) ಮಾಡಿ ವಿವಿಧ ವಿಭಾಗಗಳಿಗೆ ಆಯ್ಕೆಯಾದ ಅತಿಥಿ ಉಪನ್ಯಾಸಕರ ಹೆಸರುಗಳನ್ನು ಅನುಮೋದಿಸಿ ಒಪ್ಪಿಗೆಯನ್ನು ಸೂಚಿಸಿತು. |
| 08 | ರಾಯಚೂರು ವಿಶ್ವವಿದ್ಯಾಲಯಲದ 2022-23 ನೇ ಆರ್ಥಿಕ ಸಾಲಿನ 2 ನೇ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯಲದ 2022-23 ನೇ ಆರ್ಥಿಕ ಸಾಲಿನ 2 ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಡಾವಳಿಗಳನ್ನು ದೃಢೀಕರಿಸಿತು. |
| 09 | ಅತಿಥಿ ಉಪನ್ಯಾಸಕರುಗಳು ಮತ್ತು ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ ವೇತನ ಪಾವತಿಸುವ ಕುರಿತು ಚರ್ಚೆ. | 2 ನೇ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಅನುಮೋದಿಸಿ, ಅತಿಥಿ ಉಪನ್ಯಾಸಕರ ವೇತನ ನಿಗದಿಪಡಿಸುವ ವಿಯಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಹಣಕಾಸು ಸಮಿತಿಯಲ್ಲಿ ನಿರ್ಣಯಿಸಿರುವಂತಹ ವೇತನವನ್ನು ನೀಡಲು ಸಿಂಡಿಕೇಟ್ ಸಭೆಯು ಒಪ್ಪಿಗೆ ನೀಡಿತು. |
| 10 | ರಾಯಚೂರು ವಿಶ್ವವಿದ್ಯಾಲಯದಲ್ಲಿ UUCMS ತಂತ್ರಾಂಶವನ್ನು ನಿರ್ವಹಣೆ ಮಾಡಲು ಮೂರು ತಾಂತ್ರಿಕ ಅಧಿಕಾರಿಗಳನ್ನು ಸಂಚಿತ ವೇತನ ಆಧಾರದ ಮೇಲೆ ನೇಮಕ ಮಾಡುವ ಕುರಿತು. | ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನದಂತೆ UUCMS ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು, ವಿಶ್ವವಿದ್ಯಾಲಯವು ತನ್ನ ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಪ್ರವೇಶಾತಿ, NEP-2020 Course Structure, ಪರೀಕ್ಷಾ ವಿಭಾಗದ ಎಲ್ಲಾ ಕಾರ್ಯಗಳು ನಡೆದಿದ್ದು, ಸದ್ಯ ವಿಶ್ವವಿದ್ಯಾಲಯದಲ್ಲಿ ಸುಮಾರು 45 ಸಾವಿರ ವಿದ್ಯಾರ್ಥಿಗಳಿದ್ದು (UG/PG) ತಾಂತ್ರಿಕ ನೈಪುಣ್ಯತೆ, ಶೈಕ್ಷಣಿಕ ಅನುಭವವುಳ್ಳ ಕೆಲಸಗಾರರು ಇಲ್ಲದ ಕಾರಣ ವಿಶ್ವವಿದ್ಯಾಲಯದ ಮೇಲೆ ಹೊರೆ ಹೆಚ್ಚಾಗಿರುತ್ತದೆ. ಈ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯದ ಕೆಲಸಗಳು ಸುಗಮವಾಗಿ ನಡೆಸಲು ವಿಶ್ವವಿದ್ಯಾಲಯದಲ್ಲಿ ಇರುವಂತಹ ಸುಮಾರು 45 ಸಾವಿರ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಗಳನ್ನು ಮಾಡಿ |

| | | |
|---|---|---|
| | | ಅನುಭವ ಉಳ್ಳಂತಹ ಅಭ್ಯರ್ಥಿಗಳನ್ನು UUCMS ತಾಂತ್ರಿಕ ಅಧಿಕಾರಿಗಳನ್ನಾಗಿ ನೇಮಿಸುವ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ 3 ರ ಬದಲು 4 ತಾಂತ್ರಿಕ ಅಧಿಕಾರಿಗಳನ್ನು 1 ಶೈಕ್ಷಣಿಕ, 2 ಪರೀಕ್ಷಾ ಹಾಗೂ 1 ಹಣಕಾಸು ವಿಭಾಗದ ಅಧಿಕಾರಿಗಳನ್ನು ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ನೇಮಿಸಲು ಒಪ್ಪಿಗೆ ನೀಡಿ ವಿಶ್ವವಿದ್ಯಾಲಯ ನಿಯಮಾನುಸಾರ ನೇಮಿಸಲು ಸಿಂಡಿಕೇಟ ಸಭೆಯು ಒಪ್ಪಿಗೆಯನ್ನು ನೀಡಿತು. |
| | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಚರ್ಚೆ. | ಅಧ್ಯಕ್ಷರ ಅನುಮತಿ ಮೇರೆಗೆ,<br>1. ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ವಿಚಾರವಾಗಿ ಹಿರಿಯ ಬಾಹ್ಯ ಪರಿವಿಕ್ಷಕರನ್ನು ನೇಮಿಸಲು ಅನುಮೋದಿಸಲಾಯಿತು.<br>2. ಸಿಂಡಿಕೇಟ ಸಭೆಯು ನಡೆಯುತ್ತಿರುವ ವೇಳೆ ಡಾ.ಬಸವಪ್ರಸಾದ ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಯಾದಗಿರಿ, ಏಕಾಏಕಿ ಸಭೆಗೆ ನುಗ್ಗಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಸಿಂಡಿಕೇಟ ಸಮಿತಿಯ ಅಧ್ಯಕ್ಷರಾದ ಪ್ರೊ.ಹರೀಶ್ ರಾಮಸ್ವಾಮಿ ಅವರನ್ನು ಡಾ.ಬಸವಪ್ರಸಾದ ಅವರು ನಿಂದಿಸಿ, ಅವಮಾನ ಮಾಡಿರುತ್ತಾರೆ. ಈ ಅನುಚಿತವಾದ ವರ್ತನೆಯನ್ನು ಸಿಂಡಿಕೇಟ ಸಭೆಯ ಸದಸ್ಯರೆಲ್ಲರೂ ಕಠಿಣವಾಗಿ ಖಂಡಿಸಿ ಹಾಗೂ ಈ ನಡವಳಿಕೆಯನ್ನು ಒಬ್ಬ ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕರು ಮಾಡಿದಂತಹ ದುರ್ನಡತೆ ಹಾಗೂ ಅಶಿಸ್ತಿನ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಿ ಡಾ.ಬಸವಪ್ರಸಾದ ಇವರಿಗೆ ಶೋಕಾಸು ನೋಟಿಸ್ ನೀಡಿ ಅವರನ್ನು ಸರ್ಕಾರದ ಮಟ್ಟದಲ್ಲಿ ಮಾನ್ಯ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ಇವರಿಗೆ ಪತ್ರ ಬರೆದು ಡಾ.ಬಸವಪ್ರಸಾದ ಅವರ ನಡವಳಿಕೆ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.<br>3. ವಿಶ್ವವಿದ್ಯಾಲಯ ಮಟ್ಟದಲ್ಲಿ ಸ್ನಾತಕೋತ್ತರ ಪದವಿಗಳ ವಿವಿಧ ವಿಭಾಗಗಳಿಗೆ ಚಿನ್ನದ ಪದಕವನ್ನು ನೀಡಲು/ಸೂಚಿಸಲು ಪರಿನಿಯಮಾವಳಿ ರಚಿಸಲು ಕೆಳಕಂಡ ಸಮಿತಿಯನ್ನು ರಚಿಸಲಾಯಿತು.<br>1. ಶ್ರೀ ಮೋಹನ್ ಕುಮಟಕರ್ ಎಂ.<br>2. ಶ್ರೀ ಜಗದೀಶ್ ಹೆಚ್.ಬಿನ್ ಅಮರಣ್ಣ<br>3. ಶ್ರೀ ಶಿವಬಸಪ್ಪ ಮಾಲಿಪಾಟೀಲ<br>4. ಶ್ರೀಮತಿ ಕಾವೇರಿ ಕೇದಾರನಾಥ್ |

| | | |
|---|---|---|
| | | 4. ದಿನಾಂಕ 23.08.2022 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ನಿರ್ಣಯಿಸಿದಂತೆ ರಾಯಚೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ ಮತ್ತು ಸ್ಥಳ ನಿಯೋಜನಾಧಿಕಾರಿ ಮತ್ತು ವಿಶ್ವವಿದ್ಯಾಲಯ ಉದ್ಯೋಗ ಬ್ಯೂರೋಗೆ 3 ಜನ Consultants ನೇಮಿಸಿಕೊಳ್ಳಲು ತೀರ್ಮಾನ ಮಾಡಿದ್ದು, ಇವರಿಗೆ ತಿಂಗಳಿಗೆ ರೂ 35,000/- ಸಂಚಿತ ವೇತನ ನೀಡಲು ನಿರ್ಧರಿಸಲಾಗಿದ್ದು, ಈ ಕುರಿತು ಅಂದಿನ 19.12.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಯಲ್ಲಿ ಈ ಪರಿನಿಯಮಾವಳಿಗಳು ಬಿಟ್ಟು ಹೋಗಿದ್ದರಿಂದ ಪುನರ್ ಪರಿಶೀಲಿಸಿ ಈ ಕೆಳಕಂಡ ಹೆಸರುಗಳನ್ನು ನೇಮಕ ಮಾಡಲು ಸಿಂಡಿಕೇಟ ಸಭೆಯು ಅನುಮೋದನೆ ನೀಡಿತು.<br>1. ದಿನೇಶ್ ಬಾಳಿಗಾ – ಕೌಶಲ್ಯಾಭಿವೃದ್ಧಿ<br>2. ಗುರುರಾಜ ಹಿರೇಮಠ – ಉದ್ಯೋಗ ಬ್ಯೂರೊ<br>3. ಎಸ್.ಬಿ.ಚಟ್ಟಿ – ಸ್ಥಳ ನಿಯೋಜನಾಧಿಕಾರಿ ಎಂದು ಅವರನ್ನು ನೇಮಿಸಲಾಯಿತು. |

13/12/23

(ಪ್ರೊ.ವಿಶ್ವನಾಥ ಎಂ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ ರಾಯಚೂರು.

13.12.2023.

(ಪ್ರೊ.ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಸಭೆಯ ಅಧ್ಯಕ್ಷರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.